ಅವಕಾಶ ಕೊಟ್ಟರೆ ಬ್ಯಾಡ್ ಪ್ರಿಸಿಡೆಂಟ್ ಆಗುತ್ತದೆ.

ಶ್ರೀ ಹೆಚ್.ಸಿ.ಬಸವರಾಜ್: ತಾವು ಇಷ್ಟು ಕಠಿಣವಾದರೆ ಹೇಗೆ? ನಮ್ಮ ರಕ್ಷಣೆಗೆ ಬರುವವರು ಯಾರು?

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಜೆ.ಡಿ.ನಾಯಕ್‌ರವರೆ, ಮಾನ್ಯ ವಸತಿ ಸಚಿವರು ಗುಲ್ಬರ್ಗದಲ್ಲಿ ಮೇಯರ್ ಚುನಾವಣೆ ಇದೆಯೆಂದು ನನ್ನ ಪರ್ಮಿಶನ್ ತೆಗೆದುಕೊಂಡು ಹೋಗಿದ್ದಾರೆ. ಅದಕ್ಕೋಸ್ಕರ ತಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶಿವಮೊಗ್ಗ ಕೃಷಿ ಕಾಲೇಜಿನಲ್ಲಿ ಅಡಿಕೆ ಸಂಶೋಧನಾ ಕೇಂದ್ರ ಸ್ಥಾಪನೆ.

341(2082)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ):ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಕೃಷಿ ಕಾಲೇಜಿನಲ್ಲಿ ಅಡಿಕೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಸ್ಥಾಪಿಸಲಾಗುವುದು?

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ ಮತ್ತು ಆ)

ಶಿವಮೊಗ್ಗ ಜಿಲ್ಲೆಯಲ್ಲಿ ಅಡಿಕೆ ಸಂಶೋಧನಾ ಕೇಂದ್ರ ಸ್ಥಾಪಿಸುವ ಬಗ್ಗೆ ಶಿವಮೊಗ್ಗದ ಮಾನ್ಯ ವಿಧಾನ ಸಭಾ ಸದಸ್ಯರ ದಿನಾಂಕ: 29-11-99ರ ಮನವಿಯ ಪತ್ರದಂತೆ ತೋಟಗಾರಿಕೆ ನಿರ್ದೇಶಕರವರಿಂದ ವರದಿಯೊಂದನ್ನು ಕೇಳಲಾಗಿದ್ದು, ಸದರಿಯವರು ಮೇಲ್ಕಂಡ ಕೇಂದ್ರವನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಡಿಕೆಯ ಹಲವಾರು ವಿಷಯಗಳ ಬಗ್ಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸಂಶೋಧನೆ ಮಾಡುತ್ತಿದೆ ಎಂದು ನವದೆಹಲಿಯ ಐ.ಸಿ.ಎ.ಆರ್. ಸಂಸ್ಥೆಯು ಈ ಪ್ರಸ್ತಾವನೆಯನ್ನು ತಿರಸ್ಕರಿಸಿದೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ: ಮಾನ್ಯ ಅಧ್ಯಕ್ಷರೆ, ಈ ಅಡಿಕೆ ಬೆಳೆ ಬಗ್ಗೆ ನನ್ನ ಮಿತ್ರರಾದ ವಡ್ನಾಳ್ ರಾಜಣ್ಣನವರು ಕೂಡ ಹೇಳಿದರು. ಅಡಿಕೆ ಬೆಳೆಗೆ ಸಂಬಂಧಿಸಿದಂತೆ ಶಿವಮೊಗ್ದಲ್ಲಿ ಕೃಷಿ ಕಾಲೇಜು ಇದೆ. ಜೊತೆಗೆ ಶಿವಮೊಗ್ಗೆ, ಚಿಕ್ಕಮಗಳೂರು ತುಮಕೂರು, ಚಿತ್ರದುರ್ಗ, ದಾವಣಗೆರೆ ದಕ್ಷಿಣ ಕನ್ನಡ ಮತ್ತು

ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿಗೆ ಅಡಿಕೆ ಬೆಳೆಯುತ್ತಿದ್ದಾರೆ. ಅಡಿಕೆಗೆ ಈಗಾಗಲೇ ಹೆಚ್ಚಾಗಿ 'ಹಳದಿರೋಗ' ಬರುತ್ತಿದೆ. ಅದರ ಜೊತೆಗೆ ಕೇಂದ್ರ ಸರ್ಕಾರ 'ವಿದೇಶಿ' 'ವಿದೇಶಿ' ಎಂದು ಹೇಳಿ ಸ್ವದೇಶಿಯನ್ನು ತೆಗೆದು ಹಾಕುತ್ತಿದ್ದಾರೆ. ಈಗ ಸ್ವದೇಶಿ ಮಾಲಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದಾರೆ. ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಂದ್ರದಲ್ಲಿ ವಾಣಿಜ್ಯ ಮಂತ್ರಿಯಾಗಿದ್ದಾಗ ಅಡಿಕೆಗೆ ಹೆಚ್ಚಿಗೆ ಬೆಲೆ ಸಿಗುತ್ತಿತ್ತು. ಈಗ ಅಡಿಕೆ ಬೆಲೆ ಬಹಳ ಕುಸಿಯುತ್ತಿದೆ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು. ಈ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿದರೆ ಅಡಿಕೆ ಬೆಳೆಗೆ ಇವತ್ತು ಗಂಡಾಂತರ ಬಂದಿದೆ. ಎಲ್ಲೆಲ್ಲೂ ಹೆಚ್ಚು ಅಡಿಕೆ ಬೆಳೆಯುತ್ತಿದ್ದಾರೆ. ಒಂದು ರೀತಿಯಲ್ಲಿ ನೋಡಿದರೆ ನನ್ನ ಮಿತ್ರರು ಹೇಳಿದ ಹಾಗೆ ಇನ್ನುಮುಂದೆ ಬರೀ ಅಡಿಕೆಯನ್ನು ತಿನ್ನಬೇಕಾಗುತ್ತದೆ. ಇತ್ತಕಡೆ ಭತ್ತ ಹೋಯಿತು, ಕಬ್ಬು ಹೋಯಿತು ಈಗ ಅಡಿಕೆ ಬಂದಿದೆ. ಇದಕ್ಕೆ ಸರ್ಕಾರ ಏನಾದರೂ ಒಂದು ಮಿತಿಯನ್ನು ಹಾಕಬೇಕು. ಅಡಿಕೆ ಬೆಳೆಯಲಿಕ್ಕೆ ವರ್ಷಕ್ಕೆ ಒಂದು ಎಕರೆಗೆ 5 ಸಾವಿರ ರೂಪಾಯಿಗಳ ಖರ್ಚು ಬರುತ್ತದೆ. ಅಡಿಕೆ ಬೆಳೆಗೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಅಡಿಕೆ ಬಗ್ಗೆ ಸಂಶೋಧನೆ ಮಾಡತಕ್ಕ ಕೃಷಿ ವಿಶ್ವ ವಿದ್ಯಾನಿಲಯಕ್ಕೆ ಅದರಲ್ಲೂ ಶಿವಮೊಗ್ಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಈಗಾಗಲೇ ಕೃಷಿ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದ ಜೊತೆ ಚರ್ಚೆ ನಡೆಸಿ ನಾವು ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ.

ಮಾಜಿ ಶ್ಯಾನುಭೋಗರು ಹಾಗೂ ಮಾಜಿ ಪಟೇಲರು-ಇವರುಗಳಿಗೆ ಕೊಡುವ ಗೌರವ ಧನದ ಬಗ್ಗೆ.

242(2834)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಸಿಕ ಗೌರವ ಧನವನ್ನು ಮಾಜಿ ಶಾನುಭೋಗರಿಗೆ ಹಾಗೂ ಮಾಜಿ ಪಟೇಲರಿಗೆ ಮಾಸಿಕವಾಗಿ ಕೊಡುವುದೆಷ್ಟು? ಸದರಿ ಗೌರವ ಧನವನ್ನು ಮಂಜೂರು ಮಾಡಲು ಇರುವ ಷರತ್ತುಗಳೇನು?

ಆ) ಸದರಿ ಮಾಜಿ ಶ್ಯಾನುಭೋಗರು ಹಾಗೂ ಮಾಜಿ ಪಟೇಲರಿಗೆ ಕೊಡುವ ಗೌರವ ಧನದಲ್ಲಿ ವ್ಯತ್ಯಾಸವಿದೆಯೇ?